# ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ
## ೨ನೇ ರಾಜ್ಯ ಮಟ್ಟದ ಸಮ್ಮೇಳನ

# ಸ್ಮರಣ ಸಂಚಿಕೆ



Karnataka State Government Disabled Employees Association
Renukaradhya S
Indresh R

**ದಿನಾಂಕ : 22-04-2000**

**ಕಲಾಮಂದಿರ, ಮೈಸೂರು**

**ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ (ರಿ)**

**ಆರೋಗ್ಯ ಇಲಾಖೆ ಆವರಣ, ಆನಂದರಾವ್ ವೃತ್ತ, ಬೆಂಗಳೂರು - 9**

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ

ಎರಡನೇ ರಾಜ್ಯ ಮಟ್ಟದ ಸಮ್ಮೇಳನ

ಕಲಾ ಮಂದಿರ, ಮೈಸೂರು

ದಿನಾಂಕ: 22.4.2000

# ಸ್ಮರಣ ಸಂಚಿಕೆ

Karnataka State Government Disabled Employees Association
Renukaradhya S
Indresh

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ (ರಿ)
(ಸರ್ಕಾರದ ಮಾನ್ಯತೆ ಪಡೆದ ಸಂಘ)
ಆರೋಗ್ಯ ಇಲಾಖೆ ಆವರಣ, ಆನಂದರಾವ್ ವೃತ್ತ
ಬೆಂಗಳೂರು - 560 009.

ಪ್ರಧಾನ ಸಂಪಾದಕರು

ಎಸ್. ರೇಣುಕಾರಾಧ್ಯ .ಎಂ.ಎ

ಸಂಪಾದಕ ಮಂಡಳಿ

ಕೆ. ಕೆಂಚೇಗೌಡ

ಹೆಚ್.ಎಸ್. ಜಯದೇವಯ್ಯ

ಬಿ.ಎಲ್. ಲಿಂಗೇಗೌಡ

ಹೆಚ್.ಕೆ. ರಾಮು

Karnataka State Government Disabled Employees Association
Renukaradhya S
Indresh R

Souvenir published on the occasion of Second State Level Conference of Karnataka State Government Disabled Employees on 22-4-2000 at Kalamandira, Mysore. Editor S. Renukaradhya M.A.

*Conducted by:* Karnataka State G.P.H. Employees Association, Health Department Compound, Ananda Rao Circle, Bangalore - 560 009.

*Printed by:* The Director of Printing, Stationery and Publications, Government Press, Bangalore - 560 001.



## ಮುನ್ನುಡಿ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘದ ಎರಡನೇ ರಾಜ್ಯಮಟ್ಟದ ಸಮ್ಮೇಳನವನ್ನು ರಾಜ್ಯದ ಸಾಂಸ್ಕೃತಿಕ ರಾಜಧಾನಿ ಎನಿಸಿದ ಮೈಸೂರು ನಗರದ ಕಲಾಮಂದಿರದಲ್ಲಿ ದಿನಾಂಕ 22.4.2000 ದಂದು ನಡೆಸುತ್ತಿದ್ದೇವೆ. ನಮ್ಮ ಸಂಘವು ಕಳೆದ 15 ವರ್ಷಗಳಿಂದ ರಾಜ್ಯದ ಅಂಗವಿಕಲ ಸರ್ಕಾರಿ ನೌಕರರ ಶ್ರೇಯೋಭಿವೃದ್ಧಿಗಾಗಿ ಕಾರ್ಯನಿರ್ವಹಿಸಿಕೊಂಡು ಬಂದಿದೆ. 1995ನೇ ಸಾಲಿನ ನವೆಂಬರ್ 10 ರಂದು ಮೊದಲನೇ ರಾಜ್ಯಮಟ್ಟದ ಸಮ್ಮೇಳನವನ್ನು ಹೆಮ್ಮೆಯ ವಿಧಾನಸೌಧದ ಬಾಂಕ್ವೆಟ್ ಸಭಾಂಗಣದಲ್ಲಿ ಯಶಸ್ವಿಯಾಗಿ ನಡೆಸಿದ್ದು ರಾಜ್ಯದ ಅಂಗವಿಕಲ ನೌಕರರು ಮರೆತಿರಲಿಕ್ಕಿಲ್ಲ. ನಮ್ಮ ಸಂಘದ ನಿರಂತರ ಶ್ರಮದ ಫಲವಾಗಿ ಅಂಗವಿಕಲ ನೌಕರರ ಬೇಡಿಕೆಗಳು ಈಡೇರಿವೆ. ಆದರೆ ಪಧೋನ್ನತಿಗಳಲ್ಲಿ ಮೀಸಲಾತಿ ಮುಂತಾದ ಬಹುಮುಖ್ಯ ಬೇಡಿಕೆಗಳು ಇನ್ನೂ ಈಡೇರಬೇಕಾಗಿವೆ.

ನಮ್ಮ ಸಂಘದ ಮೊದಲನೇ ರಾಜ್ಯಮಟ್ಟದ ಸಮ್ಮೇಳನದ ನಂತರ ರಾಜ್ಯದಲ್ಲಿ ನಮ್ಮ ಸಂಘ ಹೆಚ್ಚು ಸಕ್ರಿಯವಾಗಿ ಬೆಳೆಯುತ್ತಿದೆ. ಗುಲ್ಬರ್ಗಾದಲ್ಲಿ ಜಿಲ್ಲಾ ಸಮ್ಮೇಳನ ಅತ್ಯಂತ ವ್ಯವಸ್ಥಿತವಾಗಿ ನಡೆಯಿತು. ಆದೇ ರೀತಿ ಹಲವಾರು ಜಿಲ್ಲೆಗಳಲ್ಲಿ ಸರ್ವಸದಸ್ಯರ ಸಭೆಗಳು ನಡೆದಿವೆ. ಹಲವು ತಾಲ್ಲೂಕು ಘಟಕಗಳೂ ಸ್ಥಾಪನೆಗೊಂಡು ಕಾರ್ಯನಿರ್ವಹಿಸುತ್ತಿವೆ. ಅಂಗವಿಕಲ ಸರ್ಕಾರಿ ನೌಕರರ ಏಕಮಾತ್ರ ಸಂಘಟನೆಯೆಂದು ಸರ್ಕಾರವು ನಮ್ಮ ಸಂಘಕ್ಕೆ ಮಾನ್ಯತೆ ನೀಡಿದೆ.

ಅಂಗವಿಕಲ ನೌಕರರು ಸಮ್ಮೇಳನವನ್ನು ಸಂಘಟಿಸುವುದು ಅತ್ಯಂತ ಕಷ್ಟದ ಕೆಲಸ. ಕೇಂದ್ರ ಸಂಘದ ಪದಾಧಿಕಾರಿಗಳೂ ಹಾಗೂ ಮೈಸೂರು ಜಿಲ್ಲಾ ಸಂಘದ ಅಧ್ಯಕ್ಷರಾದ ಶ್ರೀ ಹೆಚ್.ಕೆ. ರಾಮು ಶವರ ನೇತೃತ್ವದಲ್ಲಿ ಮೈಸೂರು ಜಿಲ್ಲಾ ಪದಾಧಿಕಾರಿಗಳು ಮೈಸೂರು ಸಮ್ಮೇಳನದ ಯಶಸ್ವಿಗಾಗಿ ಅವಿರತವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರೆಲ್ಲರಿಗೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಮೈಸೂರಿನ ಸಮ್ಮೇಳನದ ಅಂಗವಾಗಿ ಸರ್ಕಾರಿ ಮುದ್ರಾಣಾಲಯದ ಅಂಗವಿಕಲ ನೌಕರರು ಅಭಿನಯಿಸುತ್ತಿರುವ ನಾಟಕಕ್ಕೆ ಧನಸಹಾಯ ಮಾಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಈ ಸಂದರ್ಭದಲ್ಲಿ ನಾವು ಸ್ಮರಿಸುತ್ತೇವೆ.

ಈ ಎರಡನೇ ರಾಜ್ಯಮಟ್ಟದ ಸಮ್ಮೇಳನದ ಅಂಗವಾಗಿ ಹೊರತರುತ್ತಿರುವ ಸ್ಮರಣ ಸಂಚಿಕೆಯು ಅಂಗವಿಕಲ ನೌಕರರ ಕೈಪಿಡಿಯಾಗಿ ಮೂಡಿಬರುತ್ತದೆ ಎಂದು ಭಾವಿಸುತ್ತೇನೆ. ಈ ಸ್ಮರಣ ಸಂಚಿಕೆಯನ್ನು ಉಚಿತವಾಗಿ ಮುದ್ರಿಸಿಕೊಡಲು ಆದೇಶಿಸಿರುವ ಸರ್ಕಾರಕ್ಕೂ, ಸರ್ಕಾರಿ ಮುದ್ರಣಾಲಯದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗಕ್ಕೂ ನಮ್ಮ ಕೇಂದ್ರ ಸಂಘದ ಎಲ್ಲ ಪದಾಧಿಕಾರಿಗಳಿಗೂ, ಕಾರ್ಯಕಾರಿ ಸಮಿತಿ ಸದಸ್ಯರುಗಳಿಗೂ, ಎಲ್ಲ ಜಿಲ್ಲಾ ಅಧ್ಯಕ್ಷರುಗಳಿಗೂ, ಜಾಹೀರಾತು ನೀಡಿದ ಅಭಿಮಾನಿಗಳಿಗೂ, ಸಂಸ್ಥೆಗಳಿಗೂ ನನ್ನ ಆದರದ ಅಭಿನಂದನೆಗಳು. ಈ ಸ್ಮರಣ ಸಂಚಿಕೆಯನ್ನು ಸುಂದರವಾಗಿ ಹೊರತರಲು ಶ್ರಮಿಸಿದ ಸಂಘದ ಕಾರ್ಯಾಧ್ಯಕ್ಷರೂ ಆದ ಪ್ರಧಾನ ಸಂಪಾದಕ ಮಿತ್ರರಾದ ಶ್ರೀ ಎಸ್. ರೇಣುಕಾರಾಧ್ಯರಿಗೂ ನನ್ನ ಅಭಿನಂದನೆಗಳು. ಅದೇ ರೀತಿ ಸಮ್ಮೇಳನದ ಸಿದ್ಧತೆಗೆ ಹಲವಾರು ಜನ ಕಾರ್ಯನಿರ್ವಹಿಸಿದ್ದಾರೆ. ಅವರಲ್ಲಿ ಗೌರವ ಅಧ್ಯಕ್ಷರಾದ ಹೆಚ್.ಎಸ್. ಜಯದೇವಯ್ಯನವರು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಎಲ್. ಲಿಂಗೇಗೌಡರು, ಖಜಾಂಚಿ ಶ್ರೀ ಕೆ.ವಿ. ಮುನಿಯಪ್ಪನವರು, ಉಪಾಧ್ಯಕ್ಷರಾದ ಶ್ರೀ ಮಂಜೇಗೌಡ, ಶ್ರೀ. ಪುಟ್ಟರಾಜಣ್ಣ, ಶ್ರೀ ಎಂ. ಮುನಿರಾಜು, ಶ್ರೀ ಶಂಕರ್ ಸಿಂಗ್, ಶ್ರೀ ಡಿ. ರಾಮಯ್ಯ, ಶ್ರೀ ಶಾಂತರಾಜು ಮುಂತಾದವರೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ರಾಜ್ಯ ಸರ್ಕಾರಿ ಅಂಗವಿಕಲ ನೌಕರ ಬಾಂಧವರು ಈ ಸ್ಮರಣ ಸಂಚಿಕೆಯನ್ನು ಆದರದಿಂದ ಸ್ವೀಕರಿಸುತ್ತಾರೆ ಎಂದು ಆಶಿಸುತ್ತೇನೆ.

ದಿನಾಂಕ: 6.4.2000.
ಬೆಂಗಳೂರು.

ಕೆ. ಕೆಂಚೇಗೌಡ,
ಅಧ್ಯಕ್ಷರು

Karnataka State Government Disabled Employees Association
Renukaradhya S
Indresh R



## ಸಂಪಾದಕೀಯ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘವು, ಕಳೆದ 15 ವರ್ಷಗಳಿಂದ ರಾಜ್ಯದ ಅಂಗವಿಕಲ ಸರ್ಕಾರಿ ನೌಕರರ ಸಮಸ್ಯೆಗಳಿಗೆ ಸ್ಪಂದಿಸಿ ಕಾರ್ಯನಿರ್ವಹಿಸುತ್ತಾ ಬಂದಿದೆ. ಇದೀಗ ಹೊಸ ಸಹಸ್ರಮಾನದ ಆರಂಭದಲ್ಲಿ ಎರಡನೇ ರಾಜ್ಯ ಮಟ್ಟದ ಸಮ್ಮೇಳನವನ್ನು ರಾಜ್ಯದ ಸಾಂಸ್ಕೃತಿಕ ರಾಜಧಾನಿ ಎನಿಸಿದ ಮೈಸೂರಿನಲ್ಲಿ ಹಮ್ಮಿಕೊಂಡಿರುವ ಸಂದರ್ಭದಲ್ಲಿ ಒಂದು ಸ್ಮರಣ ಸಂಚಿಕೆಯನ್ನು ಹೊರತರಬೇಕೆಂಬ ಸಂಘದ ತೀರ್ಮಾನದಂತೆ ಸ್ಮರಣ ಸಂಚಿಕೆಯ ಸಂಪಾದಕತ್ವದ ಹೊಣೆಯನ್ನು ನನಗೆ ವಹಿಸಿದ್ದು, ಅದರಂತೆ ಈ ಕಾರ್ಯವನ್ನು ಯಥೋಚಿತವಾಗಿ ನಿರ್ವಹಿಸಿದ್ದೇನೆ.

ಅಂಗವಿಕಲ ಸರ್ಕಾರಿ ನೌಕರರ ಮೊದಲನೇ ರಾಜ್ಯ ಮಟ್ಟದ ಸಮ್ಮೇಳನದ ಸಂದರ್ಭದಲ್ಲಿ ನನ್ನದೇ ಸಂಪಾದಕತ್ವದಲ್ಲಿ ಹೊರತಂದ ಸ್ಮರಣ ಸಂಚಿಕೆಯನ್ನು ಅಂಗವಿಕಲ ಸರ್ಕಾರಿ ನೌಕರರ ಕೈಪಿಡಿಯಾಗಿ ಮೂಡಿ ಬರಬೇಕು ಎಂದು ಆಶಿಸಿ ಆಗ ಹೊರತಂದೆವು. ಆ ಸ್ಮರಣ ಸಂಚಿಕೆಯನ್ನು ರಾಜ್ಯದ ಅಂಗವಿಕಲ ನೌಕರರು ತುಂಬು ಹೃದಯದಿಂದ ಸ್ವೀಕರಿಸಿದರು. ಈಗಂತೂ ಅದರ ಪ್ರತಿಗಳು ದೊರಕುವುದೇ ದುರ್ಲಭವಾಗಿದೆ. ಹಿಂದಿನ ನಮ್ಮ ಅನುಭವವನ್ನು ಆಧರಿಸಿ ಈ ಸಾರಿಯ ಸ್ಮರಣ ಸಂಚಿಕೆಯೂ ಮುಖ್ಯವಾಗಿ ಅಂಗವಿಕಲ ನೌಕರರ ಧ್ವನಿಯಾಗಿ ಮೂಡಿಬರಬೇಕು. ಅವರ ಸೇವಾ ವಿಷಯಗಳು, ಲಭ್ಯವಾಗುವ ಸವಲತ್ತುಗಳ ಬಗ್ಗೆ ಮಾಹಿತಿ ನೀಡುವ ಕೈಪಿಡಿಯಂತಿರಬೇಕು ಎಂಬ ಅಭಿಲಾಷೆಯೊಂದಿಗೆ ಈ ಬಾರಿಯೂ ಸಹ ಅಂಗವಿಕಲ ನೌಕರರಿಗೆ ಸಂಬಂಧಿಸಿದಂತೆ ಇತ್ತೀಚಿನವರೆವಿಗೆ ಹೊರಡಿಸಿರುವ ಸರ್ಕಾರಿ ಆದೇಶಗಳು, ಸುತ್ತೋಲೆಗಳು, ವಿವಿಧ ರಿಯಾಯಿತಿಗಳ ನಮೂನೆಗಳು, ಕೇಂದ್ರ ಸರ್ಕಾರದ ಪದೋನ್ನತಿಗೆ ಸಂಬಂಧಿಸಿದ ಕೆಲವು ಮುಖ್ಯ ಆದೇಶಗಳನ್ನು ಈ ಸಂಚಿಕೆಯಲ್ಲಿ ಸೇರಿಸಿದ್ದೇವೆ. ಅಂಗವಿಕಲ ನೌಕರರು ಇವುಗಳ ಸದುಪಯೋಗಪಡೆದುಕೊಳ್ಳಬೇಕೆಂದು ನಾವು ಬಯಸುತ್ತೇವೆ.

ಈ ಸಂಚಿಕೆಯಲ್ಲಿ ಅಂಗವಿಕಲರಿಗೆ ಸಂಬಂಧಿಸಿದ ಲೇಖನಗಳು ಹಾಗೆಯೇ ಅಂಗವಿಕಲ ನೌಕರರೇ ಬರೆದಿರುವ ಆಯ್ದ ಕವನ, ಚುಟುಕ ನುಡಿಮುತ್ತುಗಳನ್ನು ಪ್ರಕಟಿಸಿದ್ದೇವೆ. ಸ್ಥಳಾಬಾವದಿಂದಾಗಿ ಬಂದ ಎಲ್ಲ ಕವನ ಲೇಖನಗಳನ್ನು ಪ್ರಕಟಿಸಲು ಸಾಧ್ಯವಾಗಿಲ್ಲ. ಇದಕ್ಕಾಗಿ ವಿಷಾಧಿಸುತ್ತೇವೆ. ನಮ್ಮ ಕರೆಗೆ ಓಗೊಟ್ಟು ಲೇಖನ, ಕವನ, ಚುಟುಕಗಳನ್ನು ಬರೆದು ಕಳುಹಿಸಿದ ಎಲ್ಲಾ ಅಂಗವಿಕಲ ಲೇಖಕರಿಗೂ ಧನ್ಯವಾದಗಳು.

ಈ ಸ್ಮರಣ ಸಂಚಿಕೆಯನ್ನು ಈ ಬಾರಿಯೂ ಉಚಿತವಾಗಿ ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಿಸಿಕೊಡಲು ಘನ ಸರ್ಕಾರವು ಆದೇಶ ನೀಡಿ ಅಂಗವಿಕಲರ ಬಗ್ಗೆ ಸರ್ಕಾರಕ್ಕಿರುವ ಕಾಳಜಿಯನ್ನು ಮತ್ತೊಮ್ಮೆ ವ್ಯಕ್ತಪಡಿಸಿದೆ. ಶಿಕ್ಷಣ ಇಲಾಖೆಯ ಎಲ್ಲ ಅಧಿಕಾರಿಗಳಿಗೂ ನಾವು ಕೃತಜ್ಞರಾಗಿದ್ದೇವೆ. ಹಾಗೆಯೇ ಸರ್ಕಾರದ ಔದಾರ್ಯಕ್ಕೆ ನಮ್ಮ ಸಂಘ ಚಿರಋಣಿಯಾಗಿದೆ.

ಈ ಸ್ಮರಣ ಸಂಚಿಕೆಗೆ, ಶುಭ ಸಂದೇಶಗಳನ್ನು ನೀಡಿ ನಮ್ಮನ್ನು ಹರಸಿರುವ ಸನ್ಮಾನ್ಯ ರಾಜ್ಯಪಾಲರು, ಸನ್ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಇತರ ಮಾನ್ಯ ಮಂತ್ರಿವರ್ಯರಿಗೂ, ಎಲ್ಲಾ ಗಣ್ಯರನ್ನು ನಾವು ಸ್ಮರಿಸುತ್ತೇವೆ.

ಈ ಸ್ಮರಣ ಸಂಚಿಕೆಗೆ ಜಾಹೀರಾತುಗಳನ್ನು ತಂದಿರುವ ನನ್ನ ಆತ್ಮೀಯ ಸಹೋದ್ಯೋಗಿ ಪದಾಧಿಕಾರಿಗಳಿಗೂ, ಜಿಲ್ಲಾ ಅಧ್ಯಕ್ಷರುಗಳಿಗೂ ಎಲ್ಲ ಅಂಗವಿಕಲ ಹಿತೈಷಿ ಬಂಧುಗಳಿಗೂ, ಜಾಹೀರಾತುಗಳನ್ನು ನೀಡಿದ ಸಂಸ್ಥೆಗಳಿಗೂ, ಸರ್ಕಾರಿ ಇಲಾಖೆಗಳಿಗೂ, ಜಾಹೀರಾತುದಾರರಿಗೂ ನಾವು ಅಭಾರಿಗಳಾಗಿದ್ದೇವೆ.

ಈ ಸುಂದರ ಸ್ಮರಣ ಸಂಚಿಕೆಯನ್ನು ಅಂದವಾಗಿ ಸಕಾಲಕ್ಕೆ ಮುದ್ರಿಸಿಕೊಟ್ಟು ಮಹದುಪಕಾರ ಮಾಡಿರುವ ಸರ್ಕಾರಿ ಮುದ್ರಣಾಲಯದ ಅಧಿಕಾರಿ ವರ್ಗದವರಿಗೂ ಹಾಗೂ ಸಿಬ್ಬಂದಿ ವರ್ಗದವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ.

ಈ ಸ್ಮರಣ ಸಂಚಿಕೆಯನ್ನು ಹೊರತರಲು ನನ್ನೊಂದಿಗೆ ಸದಾ ಶ್ರಮಿಸಿದ ಸಂಘದ ಅಧ್ಯಕ್ಷರಾದ ಶ್ರೀ ಕೆ. ಕಂಚೀಗೌಡರಿಗೂ ಸಂಪಾದಕ ಮಂಡಳಿಯ ಸದಸ್ಯರೆಲ್ಲರಿಗೂ ನನ್ನ ಅನಂತ ವಂದನೆಗಳು.

ಈ ಸ್ಮರಣ ಸಂಚಿಕೆಯನ್ನು ರಾಜ್ಯದ ಅಂಗವಿಕಲ ನೌಕರರು ಕಳೆದ ಸಾರಿಯಂತೆ ಆದರದಿಂದ ಸ್ವಾಗತಿಸುತ್ತೀರಿ ಎಂದು ಆಶಿಸುತ್ತೇವೆ.

ದಿನಾಂಕ 5.4. 2000, ಯುಗಾದಿ
ಬೆಂಗಳೂರು.

ಎಸ್. ರೇಣುಕಾರಾಧ್ಯ
ಪ್ರಧಾನ ಸಂಪಾದಕರು
ಮತ್ತು ಕಾರ್ಯಾಧ್ಯಕ್ಷರು

Karnataka State Government Disabled Employees Association
Renukaradhya S
Indresh R



# ಸಂಘ ನಡೆದು ಬಂದ ದಾರಿ

ಕರ್ನಾಟಕ ರಾಜ್ಯದಲ್ಲಿ ಸುಮಾರು 15 ಸಾವಿರ ಜನ ಅಂಗವಿಕಲ ಸರ್ಕಾರಿ ನೌಕರರಿದ್ದಾರೆ ಎಂದು ಒಂದು ಅಂದಾಜಿದೆ. ಅಂಗವಿಕಲ ನೌಕರರಿಗೆ ಅವರದೇ ಆದ ಅನೇಕ ಸಮಸ್ಯೆಗಳಿರುತ್ತವೆ. ಇವುಗಳ ಪರಿಹಾರಕ್ಕಾಗಿ ಅಂಗವಿಕಲರದೇ ಆದ ಒಂದು ರಾಜ್ಯಮಟ್ಟದ ಸಂಘ ಇರಬೇಕೆಂದು ನಿಶ್ಚಯಿಸಿ, ದಿನಾಂಕ 18.8.85 ರಲ್ಲಿ ಬೆಂಗಳೂರಿನ ಆರೋಗ್ಯ ಇಲಾಖೆಯ ಆವರಣದಲ್ಲಿ ಪ್ರಥಮ ಸಭೆಯನ್ನು ನಡೆಸಿ ಸಂಘದ ಸ್ಥಾಪನೆಗೆ ಬುನಾದಿ ಹಾಕಿದೆವು. ರಾಜ್ಯದ ಎಲ್ಲ ಜಿಲ್ಲೆಗಳಿಂದ ಬಂದಿದ್ದ ಅಂಗವಿಕಲ ನೌಕರ ಪ್ರತಿನಿಧಿಗಳು ಸಭೆ ಸೇರಿ 1986ನೇ ಸಾಲಿನಲ್ಲಿ ಸಂಘವನ್ನು ನೊಂದಾಯಿಸಿ, ಅಂಗವಿಕಲ ನೌಕರರ ಶ್ರೇಯೋಭಿವೃದ್ಧಿಗಾಗಿ ಅಂದಿನಿಂದ ಸಂಘವು ಕಾರ್ಯನಿರ್ವಹಿಸಿಕೊಂಡು ಬಂದಿದೆ.

ಸಂಘವು ಅಂಗವಿಕಲ ನೌಕರರ ಹಲವಾರು ಸಮಸ್ಯೆಗಳನ್ನು ಪರಿಹರಿಸುತ್ತಾ ಬಂದಿದೆ. ಸಂಘದ ಪ್ರಯತ್ನದ ಫಲವಾಗಿ ಅಂಗವಿಕಲ ನೌಕರರಿಗೆ ಹಲವಾರು ಸವಲತ್ತುಗಳು ಲಭಿಸಿವೆ. ಅವುಗಳಲ್ಲಿ ಮುಖ್ಯವಾಗಿ 1986ನೇ ಸಾಲಿನಲ್ಲಿ ಅಂಗವಿಕಲ ಸರ್ಕಾರಿ ನೌಕರರ ವರ್ಗಾವಣೆಗೆ ಸಂಬಂಧಿಸಿದಂತೆ ಮಹತ್ವದ ನೀತಿಯನ್ನು ಸರ್ಕಾರ ಪ್ರಕಟಿಸಿತು. ಆದೇ ರೀತಿ ಅಂಗವಿಕಲ ಸರ್ಕಾರಿ ನೌಕರರ ಹೆಸರಿನ ಮುಂದೆ ಅಂ.ವಿ. (ಪಿ.ಹೆಚ್) ಎಂದು ಅವರ ಸೇವಾ ಪುಸ್ತಕ, ಜೇಷ್ಠತಾ ಪಟ್ಟಿಗಳಲ್ಲಿ ನಮೂದಿಸುವಂತೆ ಎಲ್ಲ ಇಲಾಖಾ ಮುಖ್ಯಸ್ಥರುಗಳಿಗೂ ನಿರ್ದೇಶನ ನೀಡಿದೆ. ಪ್ರಾರಂಭದಲ್ಲಿ ರೂ 40 ಇದ್ದ ಅಂಗವಿಕಲ ನೌಕರರ ಪ್ರಯಾಣ ಭತ್ಯೆ ಹಂತ ಹಂತವಾಗಿ ಹೆಚ್ಚಾಗಿ ಈಗ ರೂ 200 ಆಗಿದೆ. ಇದು ಸಂಘದ ಮುಖ್ಯ ಸಾಧನೆಗಳಲ್ಲಿ ಒಂದು. ವೃತ್ತಿ ತೆರಿಗೆಯಿಂದ ಅಂಗವಿಕಲ ನೌಕರರಿಗೆ ಸರ್ಕಾರವು 1993 ರಿಂದ ವಿನಾಯಿತಿ ನೀಡಿದೆ. ಹಾಗೆಯೇ ಅಂಗವಿಕಲ ನೌಕರರಿಗೆ ತ್ರಿಚಕ್ರ ಮೋಟಾರು ವಾಹನ ಖರೀದಿಗೆ ರೂ 30 ಸಾವಿರ ಮುಂಗಡ ನೀಡಲು ಆದೇಶ ಹೊರಡಿಸಿದೆ.

1995ರ ನವೆಂಬರ್ 11ರಂದು ಜರುಗಿದ ಸಂಘದ ಮೊದಲನೇ ಸಮ್ಮೇಳನವು ನಮ್ಮ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿ ನಡೆಯಿತು. ಅಂಗವಿಕಲ ನೌಕರರ ಸಮ್ಮೇಳನದ ಸಂಘಟನೆಯಲ್ಲೂ ಇತರರಿಗಿಂತ ಕಡಿಮೆ ಇಲ್ಲ ಎಂಬುದನ್ನು ಸಾಬೀತು ಪಡಿಸಿದೆವು. ನಮ್ಮ ಸಂಘದ ಸಂಘಟನೆಯನ್ನು ಸರ್ಕಾರವು ಗುರುತಿಸಿ ಸರ್ಕಾರದ ಮಾನ್ಯತೆಯನ್ನು ನೀಡಿದೆ. ಕಳೆದ ಫೆಬ್ರವರಿ 1999 ರಲ್ಲಿ ಬೆಂಗಳೂರಿನಲ್ಲಿ ಅಂಗವಿಕಲ ಸರ್ಕಾರಿ ನೌಕರರ ವಿಧಾನ ಸೌಧ ಚಲೋ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿದೆವು.

ಅಂಗವಿಕಲ ನೌಕರರ ಇನ್ನೂ ಕೆಲವು ಮುಖ್ಯ ಬೇಡಿಕೆಗಳು ಈಡೇರಿಲ್ಲ. ಮುಖ್ಯವಾಗಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಎ. ಬಿ. ವರ್ಗದ ನೇಮಕಾತಿಗಳಲ್ಲಿ ಮೀಸಲಾತಿ ಹಾಗೂ ಪದೋನ್ನತಿಗಳಲ್ಲಿ ತನ್ನ ಅಂಗವಿಕಲ ನೌಕರರಿಗೆ ಮೀಸಲಾತಿ ಸೌಲಭ್ಯ ನೀಡಿದೆ. ನಮ್ಮ ರಾಜ್ಯದಲ್ಲಿಯೂ ಈ ಸೌಲಭ್ಯಗಳನ್ನು ಒದಗಿಸಬೇಕೆಂಬುದು ನಮ್ಮ ಪ್ರಮುಖ ಬೇಡಿಕೆಯಾಗಿದೆ. ಅದೇ ರೀತಿ ವರ್ಗಾವಣೆಗಳಲ್ಲಿ ರಿಯಾಯಿತಿಗೆ ಸ್ಪಷ್ಟವಾದ ಆದೇಶ ಇತ್ಯಾದಿ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದೇವೆ.

ನಮ್ಮ ಸಂಘದ ಎರಡನೇ ರಾಜ್ಯಮಟ್ಟದ ಸಮ್ಮೇಳನವನ್ನು ಮೈಸೂರಿನಲ್ಲಿ ಏರ್ಪಡಿಸಿರುವ ಈ ಶುಭ ಸಂದರ್ಭದಲ್ಲಿ ಶಕ್ತಿಮೀರಿ ಕಾರ್ಯ ನಿರ್ವಹಿಸುತ್ತಿರುವ ಕೇಂದ್ರ ಸಂಘದ ಎಲ್ಲ ಪದಾಧಿಕಾರಿಗಳಿಗೂ, ಜಿಲ್ಲಾ ಅಧ್ಯಕ್ಷರುಗಳಿಗೂ, ಸಮಸ್ತ ಅಂಗವಿಕಲ ನೌಕರರಿಗೂ ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಬಿ.ಎಲ್. ಲಿಂಗೇಗೌಡ,
ಪ್ರಧಾನ ಕಾರ್ಯದರ್ಶಿ

Karnataka State Government Disabled Employees Association
Renukaradhya S
Indresh R



**RAJ BHAVAN**
**BANGALORE**

15ನೇ ಡಿಸೆಂಬರ್, 1999

## ಸಂದೇಶ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘವು 2ನೇ ರಾಜ್ಯ ಮಟ್ಟದ ಸಮ್ಮೇಳನವನ್ನು ಏರ್ಪಡಿಸುತ್ತಿದ್ದು, ಈ ಸಂದರ್ಭದಲ್ಲಿ ಸ್ಮರಣ ಸಂಚಿಕೆಯೊಂದನ್ನು ಹೊರತರುತ್ತಿರುವುದನ್ನು ತಿಳಿದು ನನಗೆ ಸಂತೋಷವಾಗಿದೆ. ಸಂಘದ ಈ ಪ್ರಯತ್ನ ಸ್ತುತ್ಯಾರ್ಹ.

ಈ ಸ್ಮರಣ ಸಂಚಿಕೆ ಅಂಗವಿಕಲ ನೌಕರರಿಗೆ ಬೇಕಾಗುವ ಸಕಲ ಮಾಹಿತಿಗಳನ್ನು ಒಳಗೊಂಡು, ಅವರಿಗೆ ಉಪಯುಕ್ತ ಮಾರ್ಗದರ್ಶಿ ಕೈಪಿಡಿಯಾಗಲಿ ಎಂದು ಆಶಿಸುತ್ತಾ, ತಮಗೆಲ್ಲರಿಗೂ ಶುಭ ಕೋರುತ್ತೇನೆ.

Karnataka State Government Disabled Employees Association
Renukaradhya S
Indresh R

ವಿ.ಎಸ್. ರಮಾದೇವಿ

ಕರ್ನಾಟಕ ರಾಜ್ಯಪಾಲರು



CMP / 124 / 99

ಬೆಂಗಳೂರು - 560 001
ದಿನಾಂಕ : 20.11.99

## ಸಂದೇಶ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘದ 2ನೇ ರಾಜ್ಯ ಮಟ್ಟದ ಸಮ್ಮೇಳನವನ್ನು ಮೈಸೂರಿನಲ್ಲಿ ಆಯೋಜಿಸಿರುವುದು ಹರ್ಷದಾಯಕ ವಿಚಾರ.

ಅಂಗವಿಕಲ ನೌಕರರ ಶ್ರೇಯೋಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಾ ಬಂದಿರುವ ಸರ್ಕಾರಿ ಅಂಗವಿಕಲ ನೌಕರರ ಸಂಘದ ಚಟುವಟಿಕೆಗಳು ಹೀಗೆಯೇ ನಿರಂತರ ಮುಂದುವರೆಯಲಿ.

2ನೇ ರಾಜ್ಯಮಟ್ಟದ ಸಮ್ಮೇಳನದ ಸ್ಮರಣಾರ್ಥ ಹೊರತರಲಿರುವ ವಿಶೇಷ ಸಂಚಿಕೆ ಉಪಯುಕ್ತ ಲೇಖನಗಳಿಂದ ಕೂಡಿ ಉತ್ತಮವಾಗಿ ಮೂಡಿ ಬರಲಿ ಎಂದು ನನ್ನ ಶುಭ ಹಾರೈಕೆ.

ಎಸ್.ಎಂ. ಕೃಷ್ಣ
ಮುಖ್ಯಮಂತ್ರಿ

Karnataka State Government Disabled Employees Association
Renukaradhya S
Indresh R



ನಂ. ಗೃಸ / ಪಿ / 61 / 99

ದೂರವಾಣಿ: ಕಛೇರಿ : ೨೨೫೧೭೬೮
ನಿವಾಸ :

ವಿಧಾನ ಸೌಧ, ಬೆಂಗಳೂರು - 560 001
ದಿನಾಂಕ : 25.11.99

## ಶುಭ ಸಂದೇಶ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘದ ಆಶ್ರಯದಲ್ಲಿ ಎರಡನೇ ರಾಜ್ಯ ಮಟ್ಟದ ಸಮಾವೇಶ ಆಯೋಜಿಸಲಾಗಿರುವುದು ಅತ್ಯಂತ ಸಂತೋಷದ ಸಂಗತಿ.

ಅಂಗವಿಕಲತೆ ಯಾವುದೇ ಕಾರಣಕ್ಕೂ ಶಾಪವಾಗಬಾರದು. ಅಂಗವಿಕಲರು ಸಮಾಜಕ್ಕೆ ಹೊರೆಯಾಗದೆ, ಸಮಾಜದ ಒಟ್ಟು ಪ್ರಗತಿಗೆ ನೆರವಾಗಬೇಕು. ಹಾಗಾಗಬೇಕಾದರೆ ಅಂಗವಿಕಲ ನೌಕರರ ಮನೋಸ್ಥೈರ್ಯ ಹೆಚ್ಚಬೇಕು. ತಾವೂ ಯಾರಿಗೂ ಕೀಳಲ್ಲ ಎಂಬ ಮನೋಭಾವ ಮೂಡಿಸಿಕೊಳ್ಳಬೇಕು. ಅಂತೆಯೇ ಅವರನ್ನು ನೋಡುವ ಸಾರ್ವಜನಿಕ ದೃಷ್ಟಿ ಬದಲಾಗಬೇಕು. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ ನಡೆಸುತ್ತಿರುವ ಪ್ರಯತ್ನ ಶ್ಲಾಘನೀಯ.

ಸಮ್ಮೇಳನ ಯಶಸ್ವಿಯಾಗಲಿ. ಈ ಸಂದರ್ಭದಲ್ಲಿ ಹೊರತರಲಿರುವ 'ಸ್ಮರಣ ಸಂಚಿಕೆ' ಸಂಗ್ರಹ್ಯವಾಗುವಂತೆ ಸರ್ವಾಂಗ ಸುಂದರವಾಗಿ ಮೂಡಿ ಬರಲಿ ಎಂದು ಹಾರೈಸುತ್ತೇನೆ.

ಮಲ್ಲಿಕಾರ್ಜುನ ಖರ್ಗೆ,
ಗೃಹ ಸಚಿವರು

Karnataka State Government Disabled Employees Association
Renukaradhya S
Indresh P



ಸಂ. ಮಮಮಕಸ : 380 : 99

ದೂರವಾಣಿ: ಕಛೇರಿ : ೨೨೫೮೦೮೯
೨೦೯೨೫೩೨
ನಿವಾಸ :

ವಿಧಾನ ಸೌಧ, ಬೆಂಗಳೂರು - 560 001
ದಿನಾಂಕ : 8.12.99

## ಶುಭ ಸಂದೇಶ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ (ರಿ) ಇವರು ಎರಡನೇ ರಾಜ್ಯ ಸಮ್ಮೇಳನದ ಅಂಗವಾಗಿ ಸ್ಮರಣ ಸಂಚಿಕೆ ಹೊರತರುತ್ತಿರುವುದು ಸಂತೋಷದ ವಿಷಯ.

ಸ್ಮರಣ ಸಂಚಿಕೆಯಲ್ಲಿ ಅಂಗವಿಕಲ ವ್ಯಕ್ತಿಗಳ ಮನೋಸ್ಥೈರ್ಯವನ್ನು ಹೆಚ್ಚಿಸುವಂತಹ ಮತ್ತು ಅವರು ಸಹ ಸಮಾಜದ ಮುಖ್ಯವಾಹಿನಿಯಲ್ಲಿ ಬೆರೆಯುವಂತಹ ಲೇಖನಗಳನ್ನು ಒಳಗೊಂಡು ಅಂಗವಿಕಲರಿಗೆ ಸ್ಪಂದಿಸಲೆಂದು ಹಾರೈಸುತ್ತೇನೆ.

Karnataka State Government Disabled Employees Association
Renukaradhya S
Indresh R

ಮೋಟಮ್ಮ

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು



ಸಂ. ಪ್ರಮಪ್ರಾಶಿಸ : 531 : 99-2000

ದೂರವಾಣಿ: ಕಛೇರಿ : ೨೨೫೩೫೭೮
ನಿವಾಸ : ೩೩೩೮೪೪೫

ವಿಧಾನ ಸೌಧ, ಬೆಂಗಳೂರು - 560 001
ದಿನಾಂಕ : 23.11.99

## ಸಂದೇಶ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘದ 2ನೇ ರಾಜ್ಯ ಸಮ್ಮೇಳನ ಮೈಸೂರಿನಲ್ಲಿ 22 ಏಪ್ರಿಲ್ 2000 ರಂದು ನಡೆಯುವ ವಿಷಯ ಹಾಗೂ ಆ ಸಂದರ್ಭದಲ್ಲಿ ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಅಂಗವಿಕಲ ಸರ್ಕಾರಿ ನೌಕರರಿಗೆ ಉಪಯುಕ್ತವಾಗುವ ಕೈಪಿಡಿ ಹೊರತರುತ್ತಿರುವ ಸಮಾರಂಭವು ಯಶಸ್ವಿಯಾಗಿ ನೆರವೇರಲಿ ಎಂದು ಹಾರೈಸುತ್ತೇನೆ.

Karnataka State Government Disabled Employees Association
Renukaradhya S
Indresh R

ಹೆಚ್. ವಿಶ್ವನಾಥ್,

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಸಂ. ಸಾಸನ : 59 : 99

ದೂರವಾಣಿ: ಕಛೇರಿ : ೨೨೫೧೭೭೨
೨೦೯೨೪೮೪

ವಿಧಾನ ಸೌಧ, ಬೆಂಗಳೂರು - 560 001
ದಿನಾಂಕ : 20.11.99

## ಸಂದೇಶ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘದ 2 ನೇ ರಾಜ್ಯ ಸಮ್ಮೇಳನವನ್ನು ಬರುವ ಏಪ್ರಿಲ್ 2000ಕ್ಕೆ ರಾಜ್ಯದ ಸಂಸ್ಕೃತಿ ರಾಜಧಾನಿ ಎನಿಸಿದ ಹೆಮ್ಮೆಯ ಮೈಸೂರು ನಗರದಲ್ಲಿ ಏರ್ಪಡಿಸುತ್ತಾ ಈ ಸಮ್ಮೇಳನದ ಅಂಗವಾಗಿ ಒಂದು ಸುಂದರ ಸ್ಮರಣ ಸಂಚಿಕೆಯನ್ನು ಹೊರತರುತ್ತಿರುವ ವಿಷಯ ತಿಳಿದು ಸಂತೋಷವಾಯಿತು.

ಈ ಸ್ಮರಣ ಸಂಚಿಕೆಯು ಅಂಗವಿಕಲ ಸರ್ಕಾರಿ ನೌಕರರಿಗೆ ಒಂದು ಉಪಯುಕ್ತ ಕೈಪಿಡಿಯಾಗಲೆಂದು ಆಶಿಸುತ್ತಾ ಈ ಸಮ್ಮೇಳನದ ಸಂಚಾಲಕರೆಲ್ಲರಿಗೂ ಶುಭ ಹಾರೈಸುತ್ತೇನೆ.

ಸಿ.ಆರ್. ಸಗೀರ್ ಅಹ್ಮದ್,

ಸಾರಿಗೆ ಸಚಿವರು

Karnataka State Government Disabled Employees Association
Renukaradhya S
Indresh R



## ಸಂದೇಶ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘವು ತನ್ನ 15ನೇ ವಾರ್ಷಿಕೋತ್ಸವದ ಅಂಗವಾಗಿ ಎರಡನೇ ರಾಜ್ಯ ಮಟ್ಟದ ಸಮ್ಮೇಳನ ಏರ್ಪಡಿಸಿರುವುದು ಹಾಗೂ ಈ ಸಂದರ್ಭದಲ್ಲಿ ಒಂದು ಸ್ಮರಣ ಸಂಚಿಕೆಯನ್ನು ಹೊರತರುತ್ತಿರುವ ವಿಷಯ ತಿಳಿದು ಸಂತೋಷವಾಯಿತು. ರಾಜ್ಯ ಅಂಗವಿಕಲ ನೌಕರರ ಶ್ರೇಯೋಭಿವೃದ್ಧಿಗಾಗಿ ಕೆಲಸ ಮಾಡುತ್ತಿರುವ ಈ ಏಕೈಕ ಸಂಘಟನೆಯು ಗಣನೀಯ ಸೇವೆಯನ್ನು ಈ 15 ವರ್ಷಗಳಲ್ಲಿ ಸಲ್ಲಿಸಿದೆ. ಮುಂದೆ ಇನ್ನೂ ಹೆಚ್ಚಿನ ಶ್ರೇಯೋಭಿವೃದ್ಧಿ ಕಾರ್ಯಗಳನ್ನು ಈ ಸಂಘಟನೆ ಮಾಡಲಿ ಹಾಗೂ ಈ ಸಮ್ಮೇಳನವು ಯೋಜಿತ ರೀತಿಯಲ್ಲಿ ನಡೆದು ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

ವಿ. ಶ್ರೀನಿವಾಸ ಪ್ರಸಾದ್

ಆಹಾರ ಮತ್ತು ನಾಗರೀಕ ಪೂರೈಕೆ ರಾಜ್ಯ ಸಚಿವರು

ಭಾರತ ಸರ್ಕಾರ

Karnataka State Government Disabled Employees Association
Renukaradhya S
Indresh R



ಸಂಖ್ಯೆ: ಹರಾಸ : 202 : 99

ದೂರವಾಣಿ: ಕಛೇರಿ : ೨೨೫೫೭೦೪
: ನಿವಾಸ : ೨೦೮೨೨೬೬

ವಿಧಾನ ಸೌಧ, ಬೆಂಗಳೂರು - 560 001
ದಿನಾಂಕ : 30.11.99

## ಸಂದೇಶ

ಅಂಗವಿಕಲ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿಗಾಗಿ ಇರುವ ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘದ ಕಾರ್ಯಕ್ರಮ ಕೇಳಿ ಸಂತೋಷವಾಯಿತು. ಅಂಗವೈಕಲ್ಯ ಅದು ಶಾಪವೆಂದು ತಿಳಿಯದೆ, ಧೈರ್ಯ, ಸ್ಥೈರ್ಯ ಮತ್ತು ಕ್ರಿಯಾಶೀಲತೆಗಳೊಂದಿಗೆ ಬದುಕನ್ನು ರೂಪಿಸಿಕೊಳ್ಳಬೇಕು. ಕೆಲವರು ಹುಟ್ಟಿನಿಂದಲೇ ಅಂಗವಿಕಲತೆಯನ್ನು ಬಳುವಳಿಯಾಗಿ ಪಡೆದರೆ, ಈಗಿನ ನಮ್ಮ ಆಧುನಿಕ ಜೀವನದಲ್ಲಿ ಮನುಷ್ಯನೇ ಅಂಗವಿಕಲತೆಯನ್ನು ಕೈ ಬೀಸಿ ಕರೆದುಕೊಳ್ಳುತ್ತಾನೆ. ರಸ್ತೆ ಅಘಾತಗಳು ಬಹುಪಾಲನ್ನು ನೀಡಿದ್ದರೆ, ಕೆಲವಾರು ದೇಶಗಳಲ್ಲಿ ವಿಧ್ವಂಸಕರು ಅವುಚಿಟ್ಟ ಭೂ-ಸ್ಫೋಟಕಗಳು, ದೇಶ ದೇಶಗಳ ನಡುವೆ ನಡೆಯುವ ಯುದ್ಧಗಳು ಇನ್ನಷ್ಟು ಪಾಲನ್ನು ನೀಡಿವೆ. ಅಂಗವಿಕಲರನ್ನು ನಾವು ಕರುಣೆಯಿಂದ ನೋಡಿ, ಅಯ್ಯೋ ಪಾಪ ಅನ್ನುವುದಕ್ಕೆ ಬದಲಾಗಿ, ಸಮಾಜದಲ್ಲಿ ಅವರೂ ಸಹ ಬದುಕಲು ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುವುದು ಬಹು ಮುಖ್ಯ. ಇತ್ತೀಚಿನ ವರ್ಷಗಳಲ್ಲಿ ಹಲವಾರು ಕ್ಷೇತ್ರಗಳಲ್ಲಿ ಇವರಿಗೆ ಅವಕಾಶಗಳು ಸಿಕ್ಕಿದ್ದು, ಇಲ್ಲಿ ಇವರ ಪ್ರತಿಭೆಯನ್ನು ಮೆರೆದಿದ್ದಾರೆ. ಇವರಿಗೆ ಮನೋಸ್ಥೈರ್ಯ ತುಂಬಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಸಮಾಜದ ಮುಖ್ಯವಾಹಿನಿಯಲ್ಲಿ ಬೆರೆಯುವ ಕೆಲಸ ಆಗಬೇಕಾಗಿದೆ.

ಈ ಸಂಸ್ಥೆಯ ರಾಜ್ಯ ಸಮ್ಮೇಳನವು ಯಶಸ್ವಿ ಆಗಲೆಂದು ಆಶಿಸುತ್ತೇನೆ.

ಎಂ. ಶಿವಣ್ಣ

ಹಣಕಾಸು ರಾಜ್ಯ ಸಚಿವರು

Karnataka State Government Disabled Employees Association
Renukaradhya S
Indresh R



ದೂರವಾಣಿ: ಕಛೇರಿ : 77121
ಶ್ರೀ ಧರ್ಮಸ್ಥಳ - 574216,
ಕರ್ನಾಟಕ

ದಿನಾಂಕ : 15.12.99

## ಸಂದೇಶ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ (ರಿ), ಬೆಂಗಳೂರು ಇದರ ವತಿಯಿಂದ ಎರಡನೇ ರಾಜ್ಯ ಸಮ್ಮೇಳನವನ್ನು ಮೈಸೂರಿನಲ್ಲಿ ಏರ್ಪಡಿಸಿರುವ ವಿಚಾರ ತಿಳಿದು ಸಂತೋಷವಾಯಿತು.

ಈ ಸಂದರ್ಭದಲ್ಲಿ ಸವಿನೆನಪಿಗಾಗಿ ಸ್ಮರಣ ಸಂಚಿಕೆಯೊಂದನ್ನು ಹೊರತರಲುದ್ದೇಶಿಸಿರುವುದು ಔಚಿತ್ಯಪೂರ್ಣವಾಗಿದೆ. ಅಂಗವಿಕಲ ನೌಕರರ ಸಂಘದ ಧ್ಯೇಯೋದ್ದೇಶ ಹಾಗೂ ಕಾರ್ಯ ಚಟುವಟಿಕೆಗಳನ್ನು ಪರಿಚಯಿಸಬಲ್ಲ ವಿವಿಧ ವೈಚಾರಿಕ ಲೇಖನಗಳಿಂದೊಡಗೂಡಿ ಸಂಚಿಕೆ ಆಕರ್ಷಕವಾಗಿ ಪ್ರಕಟಗೊಳ್ಳಲೆಂದು ಆಶಿಸುತ್ತೇನೆ.

ಈ ದಿಸೆಯಲ್ಲಿ ನಿಮ್ಮೆಲ್ಲ ಪ್ರಯತ್ನ-ಪರಿಶ್ರಮ ಸಫಲವಾಗುವಂತೆ ಶ್ರೀ ಮಂಜುನಾಥ ಸ್ವಾಮಿ ಹರಸಲೆಂದು ಪ್ರಾರ್ಥಿಸುತ್ತೇನೆ.

ಇತಿ,

ಡಿ. ವೀರೇಂದ್ರ ಹೆಗ್ಗಡೆಯವರು

Karnataka State Government Disabled Employees Association
Renukaradhya S
Indresh R



ವಿಧಾನಸೌಧ, ಬೆಂಗಳೂರು - 560 001

ದಿನಾಂಕ : 20ನೇ ಡಿಸೆಂಬರ್ 1999

## ಸಂದೇಶ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘವು ತಮ್ಮ ಸಂಘದ ಎರಡನೇ ರಾಜ್ಯ ಸಮ್ಮೇಳನವನ್ನು 2000 ಇಸವಿಯ ಏಪ್ರಿಲ್ ತಿಂಗಳಲ್ಲಿ ಅರಸರ ಸಂಸ್ಥಾನವಾಗಿದ್ದ ಮೈಸೂರು ನಗರದಲ್ಲಿ ಏರ್ಪಡಿಸಲು ಯೋಜಿಸಿರುವುದು ಸಂತೋಷದ ವಿಷಯ. ಈ ಸುಸಂದರ್ಭದಲ್ಲಿ ಸವಿ ನೆನಪಿಗಾಗಿ ಸಾಹಿತ್ಯ ಪ್ರತಿಭೆಗಳಿಂದ ಕೂಡಿರುವ ಹಾಗೂ ಅಂಗವಿಕಲರಿಗೆ ಸಂಬಂಧಿಸಿದಂತಹ ಹಲವಾರು ವಿಷಯಗಳಿಗೆ ಸೂಕ್ತ ಮಾಹಿತಿಯನ್ನು ಸೂಚಿಸುವಂತಹ ಸುಂದರ ಕೈಪಿಡಿಯನ್ನು ಹೊರತರುತ್ತಿರುವುದು ಶ್ಲಾಘನೀಯ.

ಇಂದಿನ ಸಮಾಜದಲ್ಲಿ ಅಂಗವಿಕಲರು ತಾವು ಇತರರಿಗಿಂತ ಯಾವುದೇ ರೀತಿಯಲ್ಲಿ ಕಡಿಮೆ ಎಂಬ ಮನೋಭಾವವನ್ನು ತಳೆಯುವ ಅವಶ್ಯಕತೆಯಿಲ್ಲವೆಂಬ ಅಂಶವನ್ನು ಈಗಾಗಲೇ ಹಲವಾರು ಕ್ಷೇತ್ರಗಳಲ್ಲಿ ಅಂಗವಿಕಲರು ಸಾಬೀತುಪಡಿಸಿದ್ದಾರೆ. ಈ ದಿಸೆಯಲ್ಲಿ ಅಂಗವಿಕಲರ ಮನೋಸ್ಥೈರ್ಯ ಹಾಗೂ ಧೈರ್ಯ ಇನ್ನೂ ಹೆಚ್ಚಲೆಂದು ಆಶಿಸುತ್ತೇನೆ.

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘದ ಎರಡನೇ ರಾಜ್ಯ ಸಮ್ಮೇಳನ ಯಶಸ್ವಿಯಾಗಿ ನೆರವೇರಲೆಂದು ಹಾರೈಸುತ್ತೇನೆ.

ಬಿ.ಕೆ. ಭಟ್ಟಾಚಾರ್ಯ,

ಸರ್ಕಾರದ ಮುಖ್ಯ ಕಾರ್ಯದರ್ಶಿ.

Karnataka State Government Disabled Employees Association
Renukaradhya S
Indresh R



# MESSAGE

I am glad to learn that the "Karnataka State Government Disabled Employees Association" is conducting the second State Level Conference in Mysore. The association has been active in promoting awareness and protecting the rights of the Karnataka State Government Disabled Employees.

I trust that the conference will deliberate upon various issues concerning the welfare of the disabled. I am happy to learn that the association is planning to bring out a souvenir on the occasion.

I convey my best wishes on this occasion for all the activities of the association and wish the conference all success.

**Meera Saxena**
Commissioner for Disabled and
Secretary to Government,
Women & Child Development Department.

Karnataka State Government Disabled Employees Association
Renukaradhya S
Indresh R

## ಸಂದೇಶ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘವು ತನ್ನ ಸ್ಥಾಪನೆಯ 15ನೆಯ ವರ್ಷಾಚರಣೆಯ ಸಂದರ್ಭದಲ್ಲಿ ಎರಡನೇ ರಾಜ್ಯ ಮಟ್ಟದ ಸಮ್ಮೇಳನವನ್ನು ಮೈಸೂರಿನಲ್ಲಿ ಏರ್ಪಡಿಸಿರುವ ವಿಷಯ ತಿಳಿದು ಸಂತೋಷವಾಯಿತು.

ಈ ಸಮ್ಮೇಳನದ ಅಂಗವಾಗಿ ಹೊರತರುತ್ತಿರುವ ಸ್ಮರಣ ಸಂಚಿಕೆಯು ಅಂಗವಿಕಲ ನೌಕರರಿಗೆ ಅಗತ್ಯವಾದ ಮಾಹಿತಿಗಳನ್ನು ಒಳಗೊಂಡು ಸರ್ವಾಂಗ ಸುಂದರವಾಗಿ ಮೂಡಿ ಬರಲಿ ಎಂದು ಆಶಿಸುತ್ತೇನೆ. ಸಮ್ಮೇಳನವು ಅತ್ಯಂತ ಅರ್ಥಪೂರ್ಣ ಚರ್ಚೆಗಳನ್ನು ನಡೆಸಿ ಅಂಗವಿಕಲರು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಹೆಚ್ಚಿಗೆ ಒತ್ತು ನೀಡಲಿ ಎಂದು ಹಾರೈಸುತ್ತೇನೆ.

ಎಂ. ವಿ. ವೇದಮೂರ್ತಿ

ನಿರ್ದೇಶಕರು

ಅಂಗವಿಲಕರ ಕಲ್ಯಾಣ ನಿರ್ದೇಶನಾಲಯ

Karnataka State Government Disabled Employees Association
Renukaradhya S
Indresh R



ಜಿಲ್ಲಾ ಪಂಚಾಯತ್
ಮೈಸೂರು

ಸಂ. ಅಅಶಅ/0/ 2000-2001
3ನೇ ಏಪ್ರಿಲ್, 2000

## ಸಂದೇಶ

ರಾಜ್ಯ ಸರ್ಕಾರದ ಅಂಗವಿಕಲ ನೌಕರರ ರಾಜ್ಯ ಮಟ್ಟದ ದ್ವಿತೀಯ ಸಮ್ಮೇಳನವನ್ನು ದಿನಾಂಕ 22ನೇ ಏಪ್ರಿಲ್ 2000 ದಂದು ಮೈಸೂರಿನ ಕಲಾಮಂದಿರದಲ್ಲಿ ವ್ಯವಸ್ಥೆಗೊಳಿಸಿರುವ ವಿಷಯ ತಿಳಿದು ಸಂತೋಷವಾಯಿತು. ಅಂಗವಿಕಲ ನೌಕರರು ಇತರೆ ನೌಕರರಿಗಿಂತಲೂ ಯಾರಿಗೂ ಕಡಿಮೆ ಇಲ್ಲದಂತೆ ಎಲ್ಲಾ ಕ್ಷೇತ್ರಗಳಲ್ಲೂ ಅತ್ಯಂತ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿಕೊಂಡು ಬರುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ದುರಾದೃಷ್ಟವಶಾತ್ ದೇಹದ ಯಾವುದಾದರೊಂದು ಭಾಗದಲ್ಲಿ ಊಂಟಾದ ಊನದಿಂದ ಕಷ್ಟಪಡುತ್ತಿರುವ ಅಂಗವಿಕಲ ನೌಕರರಿಗೆ ಸಾಕಷ್ಟು ಪ್ರೋತ್ಸಾಹ, ಜೊತೆಗೆ ಸಹಾಯ ಹಸ್ತವನ್ನು ನೀಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ತಿಳಿಸಲಿಚ್ಛಿಸುತ್ತಾ ಅಂಗವಿಕಲ ನೌಕರರ ಸಮ್ಮೇಳನವು ಯಶಸ್ವಿಯಾಗಲೆಂದು ಹಾರೈಸುವೆ.

ಜೆ. ಸುನೀತ ವೀರಪ್ಪಗೌಡ
ಅಧ್ಯಕ್ಷರು
ಜಿಲ್ಲಾ ಪಂಚಾಯತ್, ಮೈಸೂರು.

Karnataka State Government Disabled Employees Association
Renukaradhya S
Indresh R

# ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘದ ಪಧಾದಿಕಾರಿಗಳು



ಶ್ರೀ ಹೆಚ್.ಎಸ್. ಜಯದೇವಯ್ಯ
ಗೌರವ ಅಧ್ಯಕ್ಷರು



ಶ್ರೀ ಕೆ. ಕೆಂಚೇಗೌಡ
ಅಧ್ಯಕ್ಷರು



ಶ್ರೀ ಎಸ್. ರೇಣುಕಾರಾಧ್ಯ
ಕಾರ್ಯಾಧ್ಯಕ್ಷರು



ಶ್ರೀ ಬಿ.ಎಲ್. ಲಿಂಗೇಗೌಡ
ಪ್ರಧಾನ ಕಾರ್ಯದರ್ಶಿ



ಶ್ರೀ ಬಿ.ಎಂ. ಮಂಜೇಗೌಡ
ಉಪಾಧ್ಯಕ್ಷರು



ಶ್ರೀ ಕೆ.ವಿ. ಮುನಿಯಪ್ಪ
ಖಜಾಂಚಿ



ಶ್ರೀ ಪುಟ್ಟರಾಜಣ್ಣ
ಉಪಾಧ್ಯಕ್ಷರು



ಶ್ರೀ ಹನುಮೇಗೌಡ
ಉಪಾಧ್ಯಕ್ಷರು

Karnataka State Government Disabled Employees Association
Renukaradhya S
Indresh R



ಶ್ರೀ ಶಂಕರಸಿಂಗ್
ಸಂಘಟನಾ ಕಾರ್ಯದರ್ಶಿ



ಶ್ರೀಮತಿ ವೆಂಕಟಲಕ್ಷ್ಮಮ್ಮ
ಸಂಘಟನಾ ಕಾರ್ಯದರ್ಶಿ



ಶ್ರೀ ಪುರುಷೋತ್ತಮ
ಸಂಘಟನಾ ಕಾರ್ಯದರ್ಶಿ



ಶ್ರೀ ಎಂ. ಮುನಿರಾಜು
ಜಂಟಿ ಕಾರ್ಯದರ್ಶಿ



ಶ್ರೀ ಡಿ. ರಾಮಯ್ಯ
ಜಂಟಿ ಕಾರ್ಯದರ್ಶಿ



ಶ್ರೀ ಶಿವಲಿಂಗೇಗೌಡ
ಜಂಟಿ ಕಾರ್ಯದರ್ಶಿ



ಶ್ರೀಮತಿ ಸಾವಿತ್ರಮ್ಮ
ಜಂಟಿ ಕಾರ್ಯದರ್ಶಿ



ಶ್ರೀ ಗಂಗರಾಜು
ಸಾಂಸ್ಕೃತಿಕ ಕಾರ್ಯದರ್ಶಿ



ಶ್ರೀ ಸಿ. ನಾಗರಾಜು
ಸಾಂಸ್ಕೃತಿಕ ಕಾರ್ಯದರ್ಶಿ

Karnataka State Government Disabled Employees Association
Renukaradhya S
Indresh R



ಶ್ರೀ ಲಿಂಗರಾಜು

ಸಾಂಸ್ಕೃತಿಕ ಕಾರ್ಯದರ್ಶಿ



ಶ್ರೀ ಮಲ್ಲಿಕಾರ್ಜುನ

ಸಾಂಸ್ಕೃತಿಕ ಕಾರ್ಯದರ್ಶಿ

## ಜಿಲ್ಲಾ ಅಧ್ಯಕ್ಷರುಗಳು



ಶ್ರೀ ಶಾಂತಪ್ಪ ಸಂಗಾವಿ

ಗುಲ್ಬರ್ಗಾ



ಶ್ರೀ ಹೆಚ್.ಕೆ. ರಾಮು

ಮೈಸೂರು



ಶ್ರೀ ಹೆಚ್.ಹೆಚ್. ಜಯರಾಮ್

ಮಂಡ್ಯ



ಶ್ರೀ ಮರುಳ ಸಿದ್ದಯ್ಯ

ದಾವಣಗೆರೆ



ಶ್ರೀ ಕೆ.ಎಸ್. ಅರಕೇರಿ

ಧಾರವಾಡ



ಶ್ರೀ ಎಸ್.ಜಿ. ಮಹೇಶ್

ಮಂಗಳೂರು

Karnataka State Government Disabled Employees Association
Renukaradhya S
Indresh R



ಶ್ರೀ ಕೆ. ಮಂಜಪ್ಪ
ಚಿಕ್ಕಮಗಳೂರು



ಶ್ರೀ ಎನ್.ಎಮ್. ಬೊಮ್ಮನ ಕಟ್ಟಿ
ಹಾವೇರಿ



ಶ್ರೀ ಹೊಸಳ್ಳಿ ವೈಜನಾಥ್
ಬೀದರ್



ಶ್ರೀ ಎ.ಎಸ್. ಕುಲಕರ್ಣಿ
ಗದಗ್



ಶ್ರೀ ಕೃಷ್ಣಮೂರ್ತಿ
ಕೋಲಾರ



ಶ್ರೀ ಬಿ.ಜಿ. ಪಾಟೀಲ್
ಬಾಗಲಕೋಟೆ

Karnataka State Government Disabled Employees Association
Renukaradhya S
Indresh R



ಶ್ರೀ ಕೆ. ಬಾಲಗಂಗಾಧರ್
ಬಳ್ಳಾರಿ



ಶ್ರೀ ಎಸ್.ಆರ್. ಕಟ್ಟೀಮನಿ
ಬಿಜಾಪುರ



ಶ್ರೀ ಜೆ. ದೇವರಾಜು
ತುಮಕೂರು

ಶ್ರೀಮಂಜುನಾಥ್
ಜಿಲ್ಲಾ ಅದ್ಯಕ್ಷರು
ಶಿವಮೊಗ್ಗ



ಶ್ರೀ ತಳವಾರ್
ಬೆಳಗಾವಿ

ಶ್ರೀ ಮುರುಳೀಧರ ಕೆ.
ಜಿಲ್ಲಾ ಅದ್ಯಕ್ಷರು
ಕೊಡಗು ಜಿಲ್ಲೆ

## ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ, ಮೈಸೂರು ಜಿಲ್ಲಾ ಶಾಖೆಯ ಪದಾಧಿಕಾರಿಗಳು



ಶ್ರೀ ಹೆಚ್.ಕೆ. ರಾಮು
ಅಧ್ಯಕ್ಷರು



ಶ್ರೀ ಎನ್. ಸುಬ್ರಹ್ಮಣ್ಯ
ಉಪಾಧ್ಯಕ್ಷರು



ಶ್ರೀ ಡಿ.ವಿ. ಮಂಜುನಾಥ್
ಉಪಾಧ್ಯಕ್ಷರು



ಶ್ರೀ ಜಿ. ರಾಜಶೇಖರ್
ಉಪಾಧ್ಯಕ್ಷರು



ಶ್ರೀ ಸಾತನೂರು ದೇವರಾಜ್
ಪ್ರಧಾನ ಕಾರ್ಯದರ್ಶಿ



ಶ್ರೀ ಆರ್. ಜಗನ್ನಾಥ್
ಸಂಘಟನಾ ಕಾರ್ಯದರ್ಶಿ

Karnataka State Government Disabled Employees Association
Renukaradhya S
Indresh R




ಮೊದಲನೇ ಸಮ್ಮೇಳನದ ಪ್ರತಿನಿಧಿ ಸಮಾವೇಶದಲ್ಲಿ ವೇದಿಕೆಯ ಮೇಲೆ ಸಂಘದ ಪದಾಧಿಕಾರಿಗಳು

Karnataka State Government Disabled Employees Association
Renukaradhya S
Indresh R




ಮೊದಲನೇ ಸಮ್ಮೇಳನದ ಸಮಾರೋಪ ಸಮಾರಂಭ



ಗುಲ್ಬರ್ಗಾ ಜಿಲ್ಲಾ ಸಮ್ಮೇಳನದಲ್ಲಿ ಆತ್ಮಬಲ ಸಂಚಿಕೆ ಬಿಡುಗಡೆ




ಮೈಸೂರಿನಲ್ಲಿ ನಡೆಯುತ್ತಿರುವ ಎರಡನೆಯ ರಾಜ್ಯಮಟ್ಟದ ಸಮ್ಮೇಳನದ ಸಿದ್ಧತೆಗಾಗಿ
ಗುಲ್ಬರ್ಗಾದಲ್ಲಿ ನಡೆದ ಪೂರ್ವ ಸಿದ್ಧತಾ ಸಭೆಯ ಚಿತ್ರ

Karnataka State Government Disabled Employees Association
Renukaradhya S
Indresh R

F.-5A



ಸನ್ಮಾನ್ಯ ರಾಜ್ಯಪಾಲರಾದ ಶ್ರೀಮತಿ ವಿ.ಎಸ್. ರಮಾದೇವಿ ರವರನ್ನು ಸಂಘದ ಅಧ್ಯಕ್ಷರಾದ
ಶ್ರೀ ಕೆ. ಕೆಂಚೇಗೌಡ ಹಾಗೂ ಕಾರ್ಯಾಧ್ಯಕ್ಷರಾದ ಶ್ರೀ ಎಸ್. ರೇಣುಕಾರಾಧ್ಯ
ಇವರು ಭೇಟಿ ಮಾಡಿದಾಗಿನ ಚಿತ್ರ



ಮೈಸೂರು ಸಮ್ಮೇಳನದ ಸಿದ್ಧತೆಗಾಗಿ ರಾಜ್ಯ ಸಂಘದ ಸಭೆ

Karnataka State Government Disabled Employees Association
Renukaradhya S
Indresh R



ಕ.ರಾ.ಸ ಅಂಗವಿಕಲ ನೌಕರರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರು



ಸರ್ಕಾರಿ ಕೇಂದ್ರ ಮುದ್ರಣಾಲಯದ ಅಂಗವಿಕಲ ನೌಕರರು ಅಭಿನಯಿಸಿದ ಶ್ರೀ ಕೃಷ್ಣ ಸಂಧಾನ ನಾಟಕ ನಡೆದಾಗ ಜರುಗಿದ ಸಮಾರಂಭದಲ್ಲಿ ರಾಜ್ಯ ಸಂಘದ ಪದಾಧಿಕಾರಿಗಳು ಸಚಿವರಾದ ಶ್ರೀಮತಿ ಮೋಟಮ್ಮ ರವರೊಂದಿಗೆ ವೇದಿಕೆಯ ಮೇಲೆ

Karnataka State Government Disabled Employees Association
Renukaradhya S
Indresh R



ಹಣಕಾಸು ಸಮಿತಿ

Karnataka State Government Disabled Employees Association
Renukaradhya S
Indresh R



ಪ್ರಚಾರ ಸಮಿತಿ



ದಿನಾಂಕ 3-10-1999 ರಂದು ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ (ರಿ) ಜಿಲ್ಲಾ ಶಾಖೆಯ ಉದ್ಘಾಟನಾ ಸಮಾರಂಭದಲ್ಲಿ ಕೇಂದ್ರ ಸಂಘದ ಅಧ್ಯಕ್ಷರಾದ ಶ್ರೀ ಕೆ.ಕೆಂಚೇಗೌಡರು ಹಾಗೂ ಕಾರ್ಯಾದ್ಯಕ್ಷರಾದ ಶ್ರೀ ಎಸ್. ರೇಣುಕಾರಾಧ್ಯರವರು ಹಾಗೂ ಜಿಲ್ಲಾ ಶಾಖೆಯ ಅಧ್ಯಕ್ಷರಾದ ಶ್ರೀ ಹೆಚ್.ಕೆ. ರಾಮುರವರು ಭಾಗವಹಿಸಿದ ಸಂದರ್ಭದಲ್ಲಿ

Karnataka State Government Disabled Employees Association
Renukaradhya S
Indresh R



ಜಿಲ್ಲಾ ಅಧ್ಯಕ್ಷರುಗಳೊಂದಿಗೆ ರಾಜ್ಯ ಸಂಘದ ಪದಾಧಿಕಾರಿಗಳು



ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ (ರಿ) ಜಿಲ್ಲಾ ಶಾಖೆ ಪದಾಧಿಕಾರಿಗಳು
ಮೈಸೂರು ಜಿಲ್ಲೆ, ಮೈಸೂರು.

Karnataka State Government Disabled Employees Association
Renukaradhya S
Indresh R



ಸಮ್ಮೇಳನದ ಸಿದ್ಧತಾ ಸಮಿತಿ, ಮೈಸೂರು



# ಸ್ಮರಣೆ

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ (ರಿ.) ವತಿಯಿಂದ ರಾಜ್ಯ ಮಟ್ಟದ ಸಮ್ಮೇಳನವನ್ನು ಐತಿಹಾಸಿಕ ಪ್ರೇಕ್ಷಣೆಯ ಸ್ಥಳವಾದ ಮೈಸೂರಿನಲ್ಲಿ ಎರಡನೇ ರಾಜ್ಯ ಮಟ್ಟದ ಸಮ್ಮೇಳನ ನಡೆಸಬೇಕೆಂದು ಕೇಂದ್ರ ಸಂಘ ತೀರ್ಮಾನಿಸಿರುವಂತೆ, ಮೈಸೂರಿನ ಕಲಾಮಂದಿರದಲ್ಲಿ ನಡೆಸುತ್ತಿರುವುದು ಹೆಮ್ಮೆಯ ವಿಷಯವಾಗಿರುತ್ತದೆ. ನಮ್ಮ ಸಂಘವು ರಾಜ್ಯದ ಅಂಗವಿಕಲ ನೌಕರರ ಕ್ಷೇಯೋಭಿವೃದ್ಧಿಗಾಗಿ ಕಳೆದ 15 ವರ್ಷಗಳಿಂದ, ಶ್ರೀ. ಕೆ. ಕೆಂಚೇಗೌಡ, ಅಧ್ಯಕ್ಷರು, ಶ್ರೀ. ಎಸ್. ರೇಣುಕಾರಾಧ್ಯ, ಕಾರ್ಯಾಧ್ಯಕ್ಷರು ಹಾಗೂ ಶ್ರೀ. ಬಿ. ಎಲ್. ಲಿಂಗೇಗೌಡರು ಪ್ರಧಾನ ಕಾರ್ಯದರ್ಶಿಯಾಗಿ, ಇವರುಗಳ ಮಾರ್ಗದರ್ಶನದಲ್ಲಿ ಕರ್ನಾಟಕ ರಾಜ್ಯಾದಂತಹ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಶಾಖೆಗಳನ್ನು ಒಳಗೊಂಡಂತೆ ಕಾರ್ಯ ನಿರ್ವಹಿಸುತ್ತಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ.

ನಮ್ಮ ಜಿಲ್ಲಾ ಸಂಘದ ವತಿಯಿಂದ, ರಾಜ್ಯ ಮಟ್ಟದ ಎರಡನೇ ಸಮ್ಮೇಳನವನ್ನು ನಡೆಸುವುದು ಕಷ್ಟದ ಕೆಲಸವಾದರು ಸಹ, ಕೇಂದ್ರ ಸಂಘದ ನಿರ್ದೇಶನದಂತೆ, ನಾವು ಸ್ಥಳೀಯ ರಾಜಕಾರಣಿಗಳು ಹಾಗೂ ಅಧಿಕಾರಿ ವರ್ಗದವರ ಸಂಘ - ಸಂಸ್ಥೆಗಳು ಹಾಗೂ ಜಾಹಿರಾತುದಾರರ ಸಹಕಾರದೊಡನೆ, ಮೈಸೂರಿನಲ್ಲಿ ಎರಡನೇ ಸಮ್ಮೇಳನ ನಡೆಸುತ್ತಿರುವುದು ಸಂತೋಷದ ಸಂಗತಿಯಾಗಿದೆ.

ನಮ್ಮ ಸಂಘದ ಆಶ್ರಯದಲ್ಲಿ ಹೊರತರುತ್ತಿರುವ ಸ್ಮರಣ ಸಂಚಿಕೆಯು ನೌಕರ ಬಾಂಧವರ ಕೈಪಿಡಿಯಾಗಿರುತ್ತದೆಂದು ಭಾವಿಸಿರುತ್ತೇನೆ. ಈ ಸ್ಮರಣ ಸಂಚಿಕೆಯನ್ನು ಉಚಿತವಾಗಿ ಮುದ್ರಿಸಿಕೊಡುತ್ತಿರುವ ಸರ್ಕಾರಕ್ಕೂ, ನಮ್ಮ ಕೇಂದ್ರ ಸಂಘದ ಪದಾಧಿಕಾರಿಗಳಿಗೂ ಹಾಗೂ ವಿವಿಧ ಜಿಲ್ಲೆಯ ತಾಲ್ಲೂಕು ಅಧ್ಯಕ್ಷರುಗಳಿಗೂ ಈ ಸ್ಮರಣ ಸಂಚಿಕೆ ಜಾಹಿರಾತು ಅಭಿಮಾನಿಗಳಿಗೂ, ಹಿತೈಷಿ ಅಭಿಮಾನಿಗಳಿಗೂ ನನ್ನ ಆಧರದ ಅಭಿನಂದನೆಗಳು. ಈ ಸ್ಮರಣ ಸಂಚಿಕೆಯನ್ನು ಹೊರತರಲು ಶ್ರಮಿಸಿದ ಸಂಪಾದಕ ಮಿತ್ರರಾದ ಶ್ರೀ. ಎಸ್.ರೇಣುಕಾರಾಧ್ಯ ಮಿತ್ರರಿಗೂ, ಈ ಸ್ಮರಣ ಸಂಚಿಕೆಗೆ ಹಾಗೂ ಸಮ್ಮೇಳನದ ಸಿದ್ದತೆಗಾಗಿ ಅನೇಕ ಜನ ಶ್ರಮಿಸಿದ್ದಾರೆ. ಅವರಲ್ಲಿ ಕೇಂದ್ರ ಸಂಘದ ಅಧ್ಯಕ್ಷರಾದ ಶ್ರೀ. ಕೆಂಚೇಗೌಡರು, ಕಾರ್ಯಾಧ್ಯಕ್ಷರಾದ ಶ್ರೀ. ಎಸ್. ರೇಣುಕಾರಾಧ್ಯರು. ಪ್ರಧಾನ ಕಾರ್ಯದರ್ಶಿಗಳಾದ ಶ್ರೀ. ಬಿ.ಎಲ್. ಲಿಂಗೇಗೌಡರಿಗೂ ಹಾಗೂ ಮೈಸೂರು ಜಿಲ್ಲಾ ಶಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ. ಸಾತನೂರು ದೇವರಾಜ್ ರವರಿಗೂ, ಉಪಾಧ್ಯಕ್ಷರಾದ ಶ್ರೀ. ಎಸ್. ಸುಬ್ರಮಣ್ಯ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ.ಆರ್. ಜಗನ್ನಾಥ್ ರವರಿಗೂ ಖಜಾಂಚಿಗಳಾದ ಶ್ರೀ. ಹೆಚ್. ನಟರಾಜ್ ರವರಿಗೂ ಹಾಗೂ ಕೆ ಆರ್ ನಗರ ತಾಲ್ಲೂಕು ಶಾಖೆಯ ಅಧ್ಯಕ್ಷರಾದ ಶ್ರೀ. ಬಿ. ವಿ. ಈಶ್ವರಪ್ಪ ರವರಿಗೂ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ. ಹೆಚ್. ಎಂ. ನಂಜುಂಡಶೆಟ್ಟಿ (ರಘು) ರವರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ರಾಜ್ಯ ಸರ್ಕಾರಿ ಅಂಗವಿಕಲ ನೌಕರ ಬಾಂದವರಿಗೆ ನನ್ನ ವಂದನೆಗಳನ್ನು ತಿಳಿಸುತ್ತೇನೆ.

ಹೆಚ್. ಕೆ. ರಾಮು
ಅಧ್ಯಕ್ಷರು
ಕರ್ನಾಟಕ ರಾಜ್ಯ ಅಂಗವಿಕಲ ನೌಕರರ ಸಂಘ (ರಿ.)
ಮೈಸೂರು.

ಸ್ಥಳ : ಮೈಸೂರು
ದಿನಾಂಕ : 22.4.2000.

Karnataka State Government Disabled Employees Association
Renukaradhya S
Indresh R